**<u>ದಿನಾಂಕಃ 29.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ. ಎಸ್ ಎಸ್ ವಕೀಲರಿಂದಃ-</u>**

1. ದಾವಾ ಆಸ್ತಿಗೆ ತಾವು ಅಳತೆ ಮಾಡಲು ಹೋಗುವ ಪೂರ್ವದಲ್ಲಿ ಎಷ್ಟು ದಿನಗಳ ಹಿಂದೆ ಪಕ್ಷಗಾರರಿಗೆ ನೋಟೀಸ್ ಕೊಟ್ಟಿದ್ದೀರಿ ಎಂದರೆ ಸಾಕ್ಷಿ 1 ವಾರದ ಮುಂಚೆ ಎನ್ನುತ್ತಾರೆ. ವಕೀಲರುಗಳಿಗೆ ಯಾವಾಗ ನೋಟೀಸ್ ಕೊಟ್ಟಿದ್ದೀರಿ ಎಂದರೆ ಸಾಕ್ಷಿ 1 ವಾರದ ಮುಂಚೆ ಎನ್ನುತ್ತಾರೆ. ನ್ಯಾಯಾಲಯದ ನಿಯೋಗಿಯಾಗಿ ನನ್ನನ್ನು ನೇಮಕ ಮಾಡಿದ್ದು ತಮಗೆ ಯಾವುದೇ ಸರ್ವೇ ನಂಬರ್ ಆಸ್ತಿಗಳನ್ನು ಅಳತೆ ಮಾಡಿ ಎಂದು ನಮೂದು ಆಗಿಲ್ಲ ಎಂದರೆ ಸರಿ. ಸರ್ವೇ ನಂ.311, 312 , 262 ಮತ್ತು 149 ಆಸ್ತಿಗಳು ವಾದಿಯು ತನ್ನ ಮೆಮೋ ಆಫ್ ಇನ್ಸ್ಟ್ರಕ್ಷನ್ ನಲ್ಲಿ ನಮೂದಿಸಿರುವ ಆಸ್ತಿಗಳು ಎಂದರೆ ಸರಿ. ಪ್ರತಿವಾದಿಯು ಸ್ವಾಧೀನದಲ್ಲಿರುವ ಜಮೀನಿನ ಸರ್ವೇ ನಂಬರನ್ನು ನಮೂದು ಮಾಡಿಲ್ಲ ಎಂದರೆ ಸಾಕ್ಷಿ ಸರ್ಕಾರದ ಹೆಸರಿನಲ್ಲಿರುವ ಸರ್ವೇ ನಂಬರ್ 149ನ್ನು ನಮೂದು ಮಾಡಿದ್ದೇನೆ ಎನ್ನುತ್ತಾರೆ.

2. ತಾವು ದಾವಾ ಆಸ್ತಿಯನ್ನು ಅಳತೆ ಮಾಡಲು ಹೋಗುವ ಪೂರ್ವದಲ್ಲಿ ನ್ಯಾಯಾಲಯದಿಂದ ಕೇಸಿನ ದಾಖಲೆಗಳನ್ನು ಪಡೆದಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸನಂ.149ರಲ್ಲಿ ವಿಸ್ತೀರ್ಣ 3 ಎಕರೆ 10 ಗುಂಟೆ ಜಮೀನು ಪ್ರತಿವಾದಿಗೆ ಮಂಜೂರು ಆಗಿದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ದುರಸ್ಥು ಆಗಿಲ್ಲ ಎನ್ನುತ್ತಾರೆ. ಕಣ್ವ ಮುಖ್ಯ ರಸ್ತೆಯಿಂದ ಪ್ರತಿವಾದಿ 3ರವರ ಜಮೀನಿಗೆ ಹೋಗಲು ಕಚ್ಚಾ ರಸ್ತೆ ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಸದರಿ ಕಚ್ಚಾ ರಸ್ತೆ 3 ಎಕರೆ 10 ಗುಂಟೆ ವ್ಯಾಪ್ತಿಯಲ್ಲಿ ಬರುವುದಿಲ್ಲ ಹೆಚ್ಚುವರಿ ಜಾಗದಲ್ಲಿ ಒಂದು ತಿರುಗಾಡುವ ಮಣ್ಣಿನ ದಾರಿ ಇದೆ ಎನ್ನುತ್ತಾರೆ.

ಪ್ರತಿವಾದಿಯು 3 ಎಕರೆ 10 ಗುಂಟೆ ಜಮೀನನ್ನು ಹೊರತುಪಡಿಸಿ ಸನಂ.149ರ ಗೋಮಾಳದ ಉಳಿಕೆ ಜಮೀನಿನಲ್ಲಿ ಮನೆ ಕಟ್ಟಿಕೊಂಡಿದ್ದು ಮನೆಗೆ ಪಂಚಾಯಿತಿಯಿಂದ ಕೊಳವೆ ಬಾವಿ ಮತ್ತು ಕಣ್ವ ಮುಖ್ಯ ರಸ್ತೆಯಿಂದ ಮನೆಗೆ ಹೋಗುವ ಮಣ್ಣಿನ ರಸ್ತೆ ಇದೆ ಎನ್ನುತ್ತಾರೆ.

3. ಪ್ರತಿವಾದಿಯ 3 ಎಕರೆ 10 ಗುಂಟೆ ಜಮೀನಿಗೆ ಹೋಗಲು ಕಣ್ವ ಮುಖ್ಯ ರಸ್ತೆಯಿಂದ ಇರುವ ಮಣ್ಣಿನ ರಸ್ತೆಯನ್ನು ಹೊರತುಪಡಿಸಿ ಬದಲಿ ರಸ್ತೆ ಇಲ್ಲ. ಕಣ್ವ ಮುಖ್ಯ ರಸ್ತೆಯ ಪೂರ್ವ ದಿಕ್ಕಿಗೆ ಯಾವ ಸರ್ವೇ ನಂಬರ್ ಆಸ್ತಿ ಇದೆ ಎಂದರೆ ಸಾಕ್ಷಿ ಸರ್ಕಾರಿ ಗೋಮಾಳದ ಸನಂ.148ರ ಜಮೀನು ಇದೆ ಎನ್ನುತ್ತಾರೆ. ಪ್ರತಿವಾದಿಯು ಸಲ್ಲಿಸಿರುವ Memo of Instruction ಜೊತೆ ಇರುವ ದಾಖಲೆಗಳನ್ನು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಗ್ರಾಮ ನಕಾಶೆಯಲ್ಲಿ ವಿವಾದಿತ ರಸ್ತೆ ದಾಖಲಾಗಿಲ್ಲ ಎಂದರೆ ಸರಿ. ಡಾಃ ಸತ್ಯವತಿಯವರಿಗೆ ಸೇರಿದ ಜಮೀನಿಗೆ ಮತ್ತು 1ನೇ ಪ್ರತಿವಾದಿಗೆ ಸೇರಿದ ಜಮೀನಿಗೆ ಹೋಗಲು ಕಣ್ವ ಮುಖ್ಯ ರಸ್ತೆಯಿಂದ ತಮ್ಮ ಆಸ್ತಿಗಳಿಗೆ ಹೋಗಲು ತಮ್ಮ ಜಮೀನುಗಳಲ್ಲಿ ತಾವೇ ಬಿಟ್ಟು ಕೊಂಡಿರುವ ರಸ್ತೆ ಎಂದರೆ ಸಾಕ್ಷಿ ಡಾಃ ಸತ್ಯವತಿಯವರಿಗೆ ಸೇರಿದ ಜಮೀನು ಕಣ್ವ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇದೆ ಆದ್ದರಿಂದ ಅವರಿಗೆ ಕಚ್ಚಾ ರಸ್ತೆಯ ಅವಶ್ಯಕತೆ ಇಲ್ಲ ಎನ್ನುತ್ತಾರೆ. ಸದರಿ ಡಾಃ ಸತ್ಯವತಿಯವರು ತಮಗೆ ಸೇರಿದ ಜಮೀನನ್ನು ಭೂ ಪರಿವರ್ತನೆ ಮಾಡಿಸಿಕೊಂಡಿದ್ದು ಅವರ ಆಸ್ತಿಯ ಪೂರ್ವಕ್ಕೆ ಕಣ್ವ ಮುಖ್ಯ ರಸ್ತೆ, ಉತ್ತರಕ್ಕೆ ಸರ್ಕಾರಿ ಗೋಮಾಳದ ಜಮೀನು 149ರಲ್ಲಿ ಇಟ್ಟುಕೊಂಡಿರುವ ಕಚ್ಚಾ ದಾರಿ ಇದೆ ಎಂದು ತೋರಿಸಿದೆ ಎನ್ನುತ್ತಾರೆ. ದಾವಾ ಆಸ್ತಿಯನ್ನು ಅಳತೆ ಮಾಡುವಾಗ ಡಾಃ ಸತ್ಯವತಿ ಸ್ಥಳದಲ್ಲಿ ಇದ್ದರ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿಯವರಿಂದ ಯಾವುದಾದರೂ ದಾಖಲೆ ಪಡೆದಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

4. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಕ್ಷೆಯನ್ನು ವಾದಿಗೆ ಸಹಾಯ ಮಾಡಲು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಕ್ಷೆಯಲ್ಲಿ ಸ.ನಂ.149/ಪಿ34 ಆಸ್ತಿ ಇಲ್ಲ ಎಂದರೆ ಸಾಕ್ಷಿ ಮುಂದುವರೆದು ಸನಂ.149/ಪಿ31ರ ಜಮೀನು ಪ್ರಸ್ತುತ ದಾಖಲೆಗಳಲ್ಲಿ ಇಲ್ಲ ಅವುಗಳನ್ನೆಲ್ಲ ಒಟ್ಟುಗೂಡಿಸಿ ಸನಂ.149 ಎಂದು ನಮೂದಿಸಲಾಗಿದೆ ಎನ್ನುತ್ತಾರೆ. ಕಣ್ವ ಮುಖ್ಯ ರಸ್ತೆಯಿಂದ ಉತ್ತರ ದಿಕ್ಕಿಗೆ ಸಾಧನ ಸಂಗಮ ಶಾಲೆ ಇದೆ ಎಂದರೆ ಸಾಕ್ಷಿಯು ಉತ್ತರ ದಿಕ್ಕಿಗೆ ಇಲ್ಲ ಪಶ್ಚಿಮ ದಿಕ್ಕಿಗೆ ಇದೆ ಎನ್ನುತ್ತಾರೆ. ಹನುಮಂತರಾಯನ ದೇವಸ್ಥಾನಕ್ಕೆ ಹೋಗುವ ರಸ್ತೆಯ ಮೂಲಕ ವಾದಿ ಆನಂದ ರವರಿಗೆ ಸೇರಿದ ಸನಂ.311 ಮತ್ತು 312ರ ಆಸ್ತಿಗೆ ಹೋಗಬಹುದು ಎಂದರೆ ಸಾಕ್ಷಿಯು ಮೊದಲು ಹೋಗಬಹುದು ಎಂದು ನುಡಿದು ನಂತರ ಹೋಗಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

5. ವಾದಿ ಆನಂದ ರವರಿಗೆ ಸೇರಿದ ಸನಂ.311 ಮತ್ತು 312ರ ಆಸ್ತಿಗಳ ಸುತ್ತಲು ಕಾಂಪೌಂಡ್ ವಾಲ್ ನಿರ್ಮಿಸಿ ಪೂರ್ವಕ್ಕೆ ಗೇಟ್ ನ್ನು ಅಳವಡಿಸಿದ್ದಾರೆ ಎಂದರೆ ಸಾಕ್ಷಿ ಮುಂದುವರೆದು ವಾದಿಯು ಸನಂ.311 ಮತ್ತು 312ರ ಜಮೀನಿಗೆ ಯಾವುದೇ ಗೇಟ್ ನ್ನು ಅಳವಡಿಸಿಲ್ಲ ಆದರೆ ಸನಂ.310ರ ಆಸ್ತಿಯ ಮಾಲೀಕರು ತಮ್ಮ ಜಮೀನಿಗೆ ಕಾಂಪೌಂಡ್ ನಿರ್ಮಿಸಿ ಗೇಟ್ ಹಾಕಿರುತ್ತಾರೆ. ಸನಂ.310, 311, 312 ಜಮೀನುಗಳು ಒಂದಕ್ಕೊಂದು ಲಗತ್ತುಗೊಂಡಿರುತ್ತವೆ. ವಾದಿಯು ಸನಂ.311ರ ಪೂರ್ವಕ್ಕೆ ಸರ್ಕಾರಿ ಸನಂ.149ರ ಹೆಚ್ಚುವರಿಯಾಗಿ 1 ಎಕರೆ 38 ಗುಂಟೆಯಲ್ಲಿ ಸ್ವಾಧೀನ ಇದ್ದು ಸದರಿ ಸ್ವಾಧೀನ ಇರುವ ಜಾಗಕ್ಕೆ ವಾದಿ ಆನಂದ ಗೇಟ್ ಅಳವಡಿಸಿಕೊಂಡಿದ್ದು ಕಣ್ವ ಮುಖ್ಯ ರಸ್ತೆಯಿಂದ ಸದರಿ ಗೇಟ್ ಗೆ ಕಚ್ಚಾ ರಸ್ತೆ ಇದೆ ಎನ್ನುತ್ತಾರೆ. ಹನುಮಂತರಾಯನ ದೇವಸ್ಥಾನಕ್ಕೆ ಹೋಗುವ ರಸ್ತೆಗೆ ಹೊಂದಿಕೊಂಡಂತೆ ವಾದಿ ಆನಂದ ಗೇಟ್ ನ್ನು ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. ಸನಂ.310ರ ಜಮೀನಿಗೂ ಮತ್ತು ವಾದಿ ನಿರ್ಮಿಸಿರುವ ಕಾಂಪೌಂಡ್ ಗೋಡೆ ಮತ್ತು ಗೇಟ್

ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ನಾನು ಸುಳ್ಳು ನಕ್ಷೆ ತಯಾರಿಸಿ ಸುಳ್ಳು ವರದಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ